# ಕನ್ನಡ ವಿಶ್ವವಿದ್ಯಾಲಯ,ಹಂಪಿ

ವಿದ್ಯಾರಣ್ಯ-೫೮೩ ೨೭೬

## ಅಕ್ಟೋಬರ್ ೦೯, ೨೦೧೫ರ ಮಧ್ಯಾಹ್ನ ೧ ಗಂಟೆಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ೧೭೯ನೇ ಕಾರ್ಯಕಾರಿ ಸಮಿತಿಯ ತುರ್ತು ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಡಾ. ಹನುಮಣ್ಣ ನಾಯಕ ದೊರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೩. ಡಾ. ಕೆ.ಎಂ. ಮೇತ್ರಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೪. ಡಾ. ಪಿ. ಮಹಾದೇವಯ್ಯ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೦೫. ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೯. ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |

ಕುಲಸಚಿವರ ಸ್ವಾಗತದೊಂದಿಗೆ ಸಭೆಯು ಪ್ರಾರಂಭವಾಯಿತು. ಈ ಕೆಳಕಂಡ ವಿಷಯ ಕುರಿತು ಚರ್ಚಿಸಲಾಯಿತು.

**೧೭೯.೦೧. ಕನ್ನಡ ವಿಶ್ವವಿದ್ಯಾಲಯದ ಕೆಲವು ನೌಕರರು ಕುಲಸಚಿವರ ಮತ್ತು ಕುಲಪತಿಗಳ ಕಚೇರಿಯಲ್ಲಿ ಅನುಚಿತವಾಗಿ ವರ್ತಿಸಿ ಕಚೇರಿ ವೇಳೆಯಲ್ಲಿ ಕರ್ತವ್ಯನಿರತ ಅಧಿಕಾರಿಗಳೊಂದಿಗೆ ದುರ್ನಡತೆಯಿಂದ ವರ್ತಿಸಿರುವ ಕುರಿತು.**

೧. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ ಇವರು ಶ್ರೀ ಪಿ.ಎಸ್. ಕರುಣಾಕರ, ಪ್ರಥಮ ದರ್ಜೆ ಸಹಾಯಕರು, ದೂರಶಿಕ್ಷಣ ನಿರ್ದೇಶನಾಲಯ ಇವರ ಅನುಚಿತ ವರ್ತನೆಯ ಬಗ್ಗೆ ಸಲ್ಲಿಸಿದ ದೂರು.

೨. ಹಣಕಾಸು ಅಧಿಕಾರಿಗಳು ಶ್ರೀ ಚಿತ್ತಪ್ಪ, ಸರ್ವರ್ ಇವರ ಅನುಚಿತ ವರ್ತನೆಯ ಕುರಿತು ಸಲ್ಲಿಸಿದ ದೂರು.

೩. ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ದೂರು.

**ನಿರ್ಣಯ:** ಮೇಲ್ಕಂಡ ಎರಡು ಪ್ರಕರಣಗಳನ್ನು ಕೂಲಂಕಷವಾಗಿ ಚರ್ಚಿಸಿ ಸದರಿ ಸಿಬ್ಬಂದಿಗಳು ಕಚೇರಿ ವೇಳೆಯಲ್ಲಿ ಕರ್ತವ್ಯನಿರತ ಅಧಿಕಾರಿಗಳ ಜೊತೆಗೆ ಅನುಚಿತವಾಗಿ ವರ್ತಿಸುವುದಲ್ಲದೆ ಕರ್ತವ್ಯ ನಿರ್ವಹಿಸಲು ಅಡಚಣೆ ಉಂಟು ಮಾಡಿರುವುದನ್ನು ಗಂಭೀರವಾಗಿ ಪರಿಗಣಿಸಲಾಯಿತು.

ಈ ಕೆಳಕಂಡ ಲೋಪಗಳನ್ನು ಎಸಗಿದ್ದಾರೆ

೧. ಕರ್ತವ್ಯನಿರತ ಅಧಿಕಾರಿಗಳ ಕರ್ತವ್ಯಕ್ಕೆ ಭಂಗ ಉಂಟು ಮಾಡಿದ್ದಾರೆ.

೨. ಕರ್ತವ್ಯನಿರತ ಅಧಿಕಾರಿಗಳಿಗೆ ಕಚೇರಿ ವೇಳೆಯಲ್ಲಿ ಬೆದರಿಕೆ ಹಾಕಿದ್ದಾರೆ.

೩. ಅಗತ್ಯಕ್ಕಿಂತ ಹೆಚ್ಚಾಗಿ ಏರುಧ್ವನಿಯಲ್ಲಿ ಮಾತನಾಡುವುದರ ಮೂಲಕ ಅನುಚಿತವಾಗಿ ವರ್ತಿಸಿದ್ದಾರೆ.

೪. ಕುಲಸಚಿವರು ಮತ್ತು ಕುಲಪತಿಗಳ ಕಚೇರಿಗೆ ಅಪ್ಪಣೆಯಿಲ್ಲದೆ ಅನಧಿಕೃತವಾಗಿ ಒಳನುಗ್ಗಿದ್ದಾರೆ.

೫. ತಮಗೆ ಮೇಲಾಧಿಕಾರಿಗಳು ವಹಿಸಿದ ನಿಗದಿತ ಕೆಲಸಗಳನ್ನು ನಿರ್ವಹಿಸದೇ ಕೆಲಸದ ಅವಧಿಯಲ್ಲಿ ಆಡಳಿತಾಂಗಕ್ಕೆ ಗುಂಪು ಕಟ್ಟಿಕೊಂಡು ಬಂದು ಗಲಾಟೆ ಮಾಡಿದ್ದಾರೆ.

ಈ ಮೇಲ್ಕಂಡ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ ಕನ್ನಡ ವಿಶ್ವವಿದ್ಯಾಲಯದ ಪರಿನಿಯಮಗಳು (ಸೇವಾ ನಿಯಮಗಳು) ಕಂಡಿಕೆ (೩೩)ರ ಅನ್ವಯ ಈ ಕೆಳಕಂಡಂತೆ ಶಿಸ್ತುಕ್ರಮ ಜರುಗಿಸಲು ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

೧. ಶ್ರೀ ಪಿ.ಎಸ್. ಕರುಣಾಕರ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಬೇಕೆಂದು ನಿರ್ಣಯಿಸಲಾಯಿತು.

೨. ಶ್ರೀ ಚಿತ್ತಪ್ಪ, ಸರ್ವರ್ ಇವರನ್ನು ವಾಸ್ತುಶಿಲ್ಪ, ಶಿಲ್ಪಶಾಸ್ತ್ರ ಮತ್ತು ಪ್ರತಿಮಾಶಾಸ್ತ್ರ ಹಾಗೂ ವರ್ಣಚಿತ್ರಕಲಾ ವಿಭಾಗ, ಬಾದಾಮಿ ಕೇಂದ್ರಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಿ ಆದೇಶ ಹೊರಡಿಸಲು ನಿರ್ಣಯಿಸಲಾಯಿತು.

೩. ಶ್ರೀ ಪಿ.ಎಸ್. ಕರುಣಾಕರ, ಪ್ರಥಮ ದರ್ಜೆ ಸಹಾಯಕರು ಇವರ ಮೇಲೆ ಈ ವಿಷಯಕ್ಕೆ ಸಂಬಂಧಿಸಿದಂತೆ ಕಮಲಾಪುರ ಪೋಲಿಸ್ ಠಾಣೆಯಲ್ಲಿ ವಿವರಗಳೊಂದಿಗೆ ದೂರು ಸಲ್ಲಿಸಲು ನಿರ್ಣಯಿಸಲಾಯಿತು.

**೧೭೯.೦೨. ಕುಲಸಚಿವರ ನೇಮಕಾತಿಯನ್ನು ಮುಂದುವರಿಸುವ ಕುರಿತು.**

**ನಿರ್ಣಯ:** ಹಿಂದಿನ ಕುಲಸಚಿವರಾಗಿದ್ದ ಡಾ. ವಿಜಯ್ ಪೂಣಚ್ಚ ತಂಬಂಡ ಇವರನ್ನು ಕುಲಸಚಿವರ ಕಾರ್ಯಭಾರದಿಂದ ಬಿಡುಗಡೆ ಮಾಡಿ ಕನ್ನಡ ಭಾಷಾಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಡಿ. ಪಾಂಡುರಂಗಬಾಬು ಅವರನ್ನು ಸೆಪ್ಟೆಂಬರ್ ೧೫, ೨೦೧೫ ರಿಂದ ಜಾರಿಗೆ ಬರುವಂತೆ ಪ್ರಭಾರ ಕುಲಸಚಿವರಾಗಿ ನಿಯೋಜಿಸಲಾಗಿತ್ತು. ವಿಶ್ವವಿದ್ಯಾಲಯದ ಕೆಲಸಕಾರ್ಯಗಳು ಸಂಪೂರ್ಣ ಪ್ರಮಾಣದಲ್ಲಿ ನಡೆಯಬೇಕೆಂಬ ಉದ್ದೇಶದಿಂದ ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ: ೧೫ ಹಾಗೂ ಕನ್ನಡ ವಿಶ್ವವಿದ್ಯಾಲಯದ ಪರಿನಿಯಮ ಕಂಡಿಕೆ (೨೯)ರ ಅನ್ವಯ ಡಾ.ಡಿ. ಪಾಂಡುರಂಗಬಾಬು ಇವರನ್ನೇ ಖಾಯಂ ಆಗಿ ಮುಂದಿನ ಆದೇಶದವರೆಗೆ ದಿನಾಂಕ ೦೯.೧೦.೨೦೧೫ರಿಂದ ಜಾರಿಗೆ ಬರುವಂತೆ ಕುಲಸಚಿವರನ್ನಾಗಿ ನೇಮಕ ಮಾಡಲು ನಿರ್ಣಯಿಸಲಾಯಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| **ಕುಲಸಚಿವರು** | **ಕುಲಪತಿಗಳು** |
| **(ಪದನಿಮಿತ್ತ ಕಾರ್ಯದರ್ಶಿ)** | **(ಅಧ್ಯಕ್ಷರು)** |